ಸೆಲೆಬ್ರಿಟಿ

■ ಹನಿ

## ಸಚಿನ್ ರತ್ನ?

ಯಾವುದೇ ಕ್ಷೇತ್ರದಲ್ಲಿ ಅತ್ಯುನ್ನತ ಸಾಧನೆ ಮಾಡಿದ ವ್ಯಕ್ತಿಗೆ 'ಭಾರತ ರತ್ನ' ಪ್ರಶಸ್ತಿ ನೀಡುವುದೇ ಹೌದಾದರೆ, ಕ್ರಿಕೆಟಿಗ ಸಚಿನ್ ತೆಂಡೂಲ್ಕರ್‌ಗೆ ಭಾರತರತ್ನ ಸಿಗಲೇಬೇಕು. ಯಾಕೆಂದರೆ ಕ್ರಿಕೆಟ್ ಜಗತ್ತಿನಲ್ಲಿ ಏನೆಲ್ಲ ಅತ್ಯಧಿಕ ದಾಖಲೆಗಳನ್ನು ಮಾಡಬಹುದೋ ಅವೆಲ್ಲವನ್ನೂ ಸಚಿನ್ ಮಾಡಿ ಮುಗಿಸಿಯಾಗಿದೆ. ಕ್ರಿಕೆಟ್ ಆಡುವಾಗ ಸಚಿನ್ ಒಬ್ಬ ಪರಿಪೂರ್ಣ ಮನುಷ್ಯ. ಎಂತಹ ಸಂದಿಗ್ಧತೆಯಲ್ಲೂ ಆತನ 'ವಿಲ್‌ಪವರ್' ಕಂಪಿಸುವುದಿಲ್ಲ. ಇಲ್ಲವಾದಲ್ಲಿ ತಂದೆಯ ಚಿತೆಗೆ ಅಗ್ನಿಸ್ಪರ್ಶ ಮಾಡಿ, ಮೂರೇ ದಿನದಲ್ಲಿ ಇಂಗ್ಲೆಂಡಿಗೆ ಮರಳಿ, ವಿಶ್ವಕಪ್ ಪಂದ್ಯದಲ್ಲಿ 101 ಬಾಲ್‌ಗಳಲ್ಲಿ 140 ರನ್ ಸಿಡಿಸಲು ಸಾಧ್ಯವಿತ್ತೆ?

ಕಳೆದ ಎಂಟು ವರ್ಷಗಳಿಂದಲೂ ಸಚಿನ್‌ಗೆ ಭಾರತರತ್ನ ನೀಡುವ ಬಗ್ಗೆ ಒತ್ತಾಯ ಕೇಳುತ್ತಲೇ ಇದೆ. ಈ ಸಲವೂ 'ಸಚಿನ್‌ಗೆ ಭಾರತ ರತ್ನ?' ಎಂಬ ತಲೆಬರಹಗಳು ಮಾಧ್ಯಮದಲ್ಲಿ ರಾರಾಜಿಸಿದವು. ಆದರೆ ಜನವರಿ ಮುಗಿದರೂ ರತ್ನ ಪ್ರಶಸ್ತಿ ಘೋಷಣೆಯಾಗಿಲ್ಲ. ಬಹುಶಃ ಇನ್ನೆರಡು ವರ್ಷ ಕಳೆದು, 40 ದಾಟಿದ ಬಳಿಕ ಸಿಗುತ್ತದೋ ಏನೊ? ಹಾಗೆಂದು ಸಚಿನ್ ದಾಖಲೆಗಳ ಓಟವನ್ನು ನಿಲ್ಲಿಸಲು ಸಾಧ್ಯವೆ?




ಕಳೆದ ವರ್ಷ ಫೆಬ್ರುವರಿ 24ರಂದು ಸಚಿನ್ ಏಕದಿನ ಪಂದ್ಯದಲ್ಲಿ ಡಬಲ್ ಸೆಂಚುರಿ ಹೊಡೆದು ಹೊಸ ದಾಖಲೆ ಬರೆದಿದ್ದರು. ಆ ನೆನಪಿಗೆ ಈ ವರ್ಷ ಜನವರಿ 26ರಂದು ಅಂಬೆಗಾಂವ್ ಹೆದ್ದಾರಿಯಲ್ಲಿ ಚತುಷ್ಪಥ ರಸ್ತೆಗೆ ಸಚಿನ್ ಹೆಸರಿಡಲಾಗಿದೆ. ಇದೇ ವೇಳೆ ಪುಣೆಯಲ್ಲಿ ಸಚಿನ್ ಹೊಸ ಮನೆಯೊಂದನ್ನು ಖರೀದಿಸಿದ್ದಾರೆ. ಇನ್ನೊಂದೆಡೆ ಕ್ಯಾಸ್ಟ್ರಲ್‌ನ 2010ರ ಪ್ರಶಸ್ತಿ ಪ್ರಕಟವಾಗಿದ್ದು ಸಚಿನ್‌ಗೆ ವರ್ಷದ ಟೆಸ್ಟ್ ಕ್ರಿಕೆಟಿಗ, ವರ್ಷದ ಕ್ರಿಕೆಟಿಗ, ವರ್ಷದ ವಿಶೇಷ ಪ್ರಶಸ್ತಿ– ಪ್ರಕಟವಾಗಿದೆ. 'ಭಾರತ ರತ್ನ' ಬರಲಿ, ಬಿಡಲಿ– ಸಚಿನ್ ಭಾರತದ ಮಟ್ಟಿಗೆ ಅನರ್ಘ್ಯ ರತ್ನವೇ ಸರಿ.

## 'ಭೂತ' ನಟಿ



ಬಾಲಿವುಡ್ ನಟಿ, ಟಿವಿ ನಿರೂಪಕಿ ಜೆನಿಫರ್ ಲವ್ ಹೆಬಿಟ್‌ಗೆ 2011ರ ಆರಂಭ ಅತ್ಯಂತ ಸಂತಸದ ದಿನಗಳನ್ನು ತಂದಿವೆ. ಆರು ತಿಂಗಳ ಗೆಳೆಯ, ಲೇಖಕ ಅಲೆಕ್ಸ್ ಬೆಹ್ ಜತೆ ಆಕೆಯ ವಿವಾಹ ನಿಶ್ಚಿತಾರ್ಥ ಭರ್ಜರಿಯಾಗಿ ಸುದ್ದಿ ಮಾಡಿದೆ. ಅದಕ್ಕಾಗಿ ಆಕೆಯೇ ಮೂರು ಉಂಗುರಗಳನ್ನು ಖರೀದಿಸಿದಳಂತೆ. ತನಗಿಂತ ನಾಲ್ಕು ವರ್ಷ ಚಿಕ್ಕವನಾದ ಗೆಳೆಯ, ಮೆಚ್ಚುಗೆಯಾಗುವ ಒಂದು ಉಂಗುರವನ್ನು ಆಯ್ಕೆ ಮಾಡಲಿ ಎನ್ನುವುದು ಆಕೆಯ ಇಂಗಿತವಂತೆ! ಕಳೆದ 3–4 ವರ್ಷಗಳಿಂದ ಬಾಯ್‌ಫ್ರೆಂಡ್‌ಗಳನ್ನು ಬದಲಿಸುತ್ತಲೇ ಇರುವ ಜೆನಿಫರ್ ಲವ್, ಕೊನೆಗೂ ಮದುವೆ ನಿಶ್ಚಿತಾರ್ಥದ ಘಟ್ಟ ಮುಟ್ಟಿದ್ದು ದೊಡ್ಡ ಸುದ್ದಿಯೇ. ಈ ಹಿಂದೆ ಕ್ರಮವಾಗಿ ಜಾನ್ ಮೇಯರ್, ಕಾರ್ಸನ್ ಡೇಲಿ ಮತ್ತು ರೋಸ್ ಮೆಕಾಲೆ ಎಂಬ ನಟರ ಜತೆ ಸುತ್ತಾಡಿದ ಜೆನ್ನಿಫರ್, ಈ ನಿಶ್ಚಿತಾರ್ಥದ ಬಳಿಕ ಮದುವೆಯವರೆಗೆ ಸಾಗಿ ಬರುತ್ತಾಳೆಯೇ ಎನ್ನುವುದೀಗ ಪ್ರಶ್ನೆ.

'ದಿ ಘೋಸ್ಟ್ ವಿಸ್ಪರ್' ಚಿತ್ರದ ಅತ್ಯುತ್ತಮ ನಟನೆಯ ಬಳಿಕ 'ಗೋಲ್ಡನ್ ಗ್ಲೋಬ್'ಗೆ ನಾಮಕರಣವಾದದ್ದು ಆಕೆಯ ದೊಡ್ಡ ಸಾಧನೆ. ಈ ಮಧ್ಯೆ ತನ್ನ ಚೊಚ್ಚಲ ನಿರ್ದೇಶನದ ಚಿತ್ರಕ್ಕೂ ಆಕೆ ಸಿದ್ಧತೆ ನಡೆಸಿದ್ದಾಳೆ. 'ವೈಟ್ ಟಿಲ್ ಹೆಲೆನ್ ಕಮ್ಸ್' ಎಂಬ ಹೆಸರಿನ ಈ 'ಹಾರರ್' ಚಿತ್ರವೂ ಭೂತದ ಕಥೆ ಹೊಂದಿದೆಯಂತೆ. ವೈಯಕ್ತಿಕ ಜೀವನದಲ್ಲಿ ಭೂತವನ್ನು ಬಿಟ್ಟು ಮುಂದುವರಿದಿರುವ ಜೆನ್ನಿಫರ್, ಸಿನಿಮಾದಲ್ಲಿ ಮಾತ್ರ ಪದೇ ಪದೇ ಭೂತಕ್ಕೆ ಗಂಟು ಬೀಳುತ್ತಿರುವುದು ತಮಾಷೆಯಾಗಿಯೇ ಕಾಣಿಸುತ್ತಿದೆ.

## 'ನಂಬರ್ ಒನ್' ಸಂಕಷ್ಟ



ನಮ್ಮ ಸಚಿನ್ ರೀತಿಯಲ್ಲೇ ಎರಡೂ ಕೈ ಬಳಸುವಾತ 'ವಿಶ್ವದ ನಂಬರ್ ಒನ್' ಟೆನಿಸಿಗ ರಫಾಲ್ ನಾಡಲ್. ಎಡಗೈಯಲ್ಲಿ ಟೆನಿಸ್ ಆಡುವ ಹಾಗೂ ಬಲಗೈಯಲ್ಲಿ ಬರೆಯುವ ರಫಾಲ್, ಈ ಸಲ ಗಾಯದ ಸಮಸ್ಯೆಯಿಂದ ನರಳಿ ಆಸ್ಟ್ರೇಲಿಯನ್ ಓಪನ್‌ನಿಂದ ಕ್ವಾರ್ಟರ್ ಫೈನಲ್‌ನಲ್ಲೇ ಹೊರ ಬಿದ್ದಿದ್ದಾನೆ. ಸದ್ಯ ಆತನ ಗಾಯದ ಸಮಸ್ಯೆ ಗಮನಿಸಿದರೆ, 'ನಂಬರ್ ಒನ್' ಪಟ್ಟ ಹೆಚ್ಚು ಸಮಯ ಉಳಿಯುವಂತೆ ಕಾಣುತ್ತಿಲ್ಲ.

ಆವೆಮಣ್ಣಿನ ಅಂಕಣದಲ್ಲಿ ರಫಾ ಸಾರ್ವಕಾಲಿಕ ಶ್ರೇಷ್ಠ ಆಟಗಾರ. 'ಕಿಂಗ್ ಆಫ್ ಕ್ಲೇ' ಎಂದೇ ಆತನಿಗೆ ಬಿರುದು. 9 ಸಿಂಗಲ್ಸ್ ಗ್ರ್ಯಾನ್‌ಸ್ಲಾಮ್, 2008ರ ಒಲಿಂಪಿಕ್ಸ್ ಗೋಲ್ಡ್, 18 ಎಟಿಪಿ ವರ್ಲ್ಡ್ ಟೂರ್ ಮಾಸ್ಟರ್ಸ್– ಹೀಗೆ ಈತನ ಪ್ರಶಸ್ತಿಗಳ ಪಟ್ಟಿ ದೊಡ್ಡದಿದೆ. ಹಾಗೆ ನೋಡಿದರೆ ಈತ ಒಮ್ಮೆಲೇ 'ನಂಬರ್ ಒನ್' ಪಟ್ಟಕ್ಕೆ ಜಿಗಿದವನಲ್ಲ. ನಿರಂತರ 160 ವಾರಗಳ ಕಾಲ 'ನಂಬರ್ 2' ಆಗಿದ್ದವ. ಬಳಿಕ 2008ರ ಆಗಸ್ಟ್‌ನಲ್ಲಿ 'ನಂಬರ್ ಒನ್' ಆದರೂ 2009 ಜುಲೈನಲ್ಲಿ ಮತ್ತೆ ಪಟ್ಟ ಜಾರಿತ್ತು. ಆದರೆ ಹಠ ಹಿಡಿದು, ಆಟವಾಡಿ 2010ರ ಜೂನ್‌ನಿಂದ ಮತ್ತೆ 'ನಂಬರ್ ಒನ್' ಪಟ್ಟ ಗಳಿಸಿದ. 'ನಂಬರ್ ಒನ್' ಆಗುವುದು ಎಷ್ಟು ಕಷ್ಟವೋ, ಅದನ್ನು ಉಳಿಸಿಕೊಳ್ಳುವುದು ಅದಕ್ಕಿಂತ ಕಷ್ಟ. ರಫಾಗೆ ಭಾರತದ ಬುಡಕಟ್ಟು, ದಲಿತ, ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಬಗ್ಗೆ ವಿಶೇಷ ಪ್ರೀತಿ. ಆಂಧ್ರದ ಅನಂತಪುರದಲ್ಲಿ ರಫಾ ನಾಡಲ್ ಫೌಂಡೇಶನ್ ಸ್ಥಾಪಿಸಿರುವ ಕ್ರೀಡಾ ಮತ್ತು ಶೈಕ್ಷಣಿಕ ಶಾಲೆಯಲ್ಲಿ ನೂರಾರು ವಿದ್ಯಾರ್ಥಿಗಳಿಗೆ ತರಬೇತಿ ನಡೆಯುತ್ತಿದೆ. ರಫಾ ಬೇಗ ಗುಣವಾಗಲಿ. 'ನಂಬರ್ ಒನ್' ಪಟ್ಟ ಆತನ ಕೈ ತಪ್ಪದಿರಲಿ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65